ಎಂ.ವಿ.ಸಿ. ನಂ. 813/2022
ಪಿಡಬ್ಲ್ಯೂ-1

(ಇಂದು ದಿನಾಂಕಃ 19-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ VRM ವಕೀಲರಿಂದಃ**

ಅಪಘಾತ ದಿನಾಂಕ 25.12.2020 ರಂದು ಆಗಿದೆ. ಚಿಂಚೋಳಿಯಿಂದ ಹೋಗುವಾಗ ಹೇಮರೆಡ್ಡಿ ಸರ್ಕಲ ಹತ್ತಿರ ಅಪಘಾತ ಆಗಿದೆ. ನಾನು ರಾಜೇಶ್ವರ ಮೋಟಾರ ಸೈಕಲ ಮೇಲೆ ಹೊರಟಿದ್ದೆವು. ರಾಜೇಶ್ವರ ಮೋಟಾರ ಸೈಕಲ ಚಾಲನೆ ಮಾಡುತ್ತಿದ್ದ. ಅಪಘಾತ ಆದಾಗ ನಾನು ಮೋಟಾರ ಸೈಕಲ ಚಾಲನೆ ಮಾಡುತ್ತಿದ್ದೆ, ಕಲ್ಯಾಣಿ ಮತ್ತು ಪವನ್ ಹಿಂಬದಿ ಸವಾರರಾಗಿದ್ದರು ನಾನು ಮೋಟಾರ ಸೈಕಲನ್ನು ಚಾಲನೆ ಮಾಡಿಕೊಂಡು ಹೋಗಿ RTO ಜಗನ್ನಾಥರವರ ಕಾರಿಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿದೆ ಎಂದರೆ ಸರಿಯಲ್ಲ. ಪಿ. ರಾಜೇಶ್ವರಗೆ ಏನು ಗಾಯಗಳು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅಪಘಾತ ಸರ್ಕಲ್ ಸೆಂಟರ್ ನಲ್ಲಿ ಆಗಿದೆ ಎಂದರೆ ಸರಿಯಲ್ಲ. ಸರ್ಕಲ್ ನಲ್ಲಿ ಟಾರ್ ರಸ್ತೆ ಇದೆ ಎಂದರೆ ಸರಿ. ನಾವು ಮೂರು ಜನ ಬೈಕ್ ಮೇಲೆ ಹೋಗುತ್ತಿದ್ದಾಗ ಅಪಘಾತ ಆಗಿದ್ದು ಕಾರಣ ಪರಿಹಾರ ಸಿಗುವುದಿಲ್ಲ ಎಂದು ರಾಜೇಶ್ವರ ಮೋಟಾರ ಸೈಕಲ ಚಾಲನೆ ಮಾಡಿಕೊಂಡು ಬಂದು ಅಪಘಾತ ಪಡಿಸಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಮಾ ಕಂಪನಿಯವರು ತನಿಖೆಗೆ ನನ್ನ ಬಳಿ ಬಂದಿದ್ದಾಗ ನಾನು ಪವನ್, ಕಲ್ಯಾಣಿ ಮೋಟಾರ ಸೈಕಲ ಮೇಲೆ ಹೋಗುತ್ತಿರುವಾಗ ನಾನು ಮೋಟಾರ ಸೈಕಲನ್ನು ಚಾಲನೆ ಮಾಡಿಕೊಂಡು ಹೋಗಿ RTO ಜಗನ್ನಾಥರವರ ಕಾರಿಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿದೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ದಿಃ 30.01.2023 ರಂದು ಕಂಪನಿಯವರು ನನ್ನ ಬಳಿ ಬಂದು ವಿಡಿಯೋ ರೆಕಾರ್ಡಿಂಗ ಮಾಡಿ ಫೋಟೋ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಕಂಪನಿ ಮುಂದೆ ನಾನು ರಾಜೇಶ್ವರ ಮೋಟಾರ ಸೈಕಲ ಚಾಲನೆ ಮಾಡುತ್ತಿದ್ದರು ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಅಪಘಾತದ ನಂತರ ಕೂಡ ನಾನು ನನ್ನ Electrician ಕೆಲಸ ಮುಂದುವರಿಸಿದ್ದೇನೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಈ ಹಿಂದೆ ಸಂಪಾದನೆ ಮಾಡುತ್ತಿದ್ದಷ್ಟೆ ಈಗಲೂ ಸಂಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಬಳಿ ಡಿ.ಎಲ್ ಇಲ್ಲ. ಅಪಘಾತ ನಂತರ ಚಿಂಚೋಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಅಲ್ಲಿ ಆಸ್ಪತ್ರೆಯವರು ಹೆಚ್ಚಿನ ಚಿಕಿತ್ಸೆಗೆ ಹೋಗುವಂತೆ ಹೇಳಿದರು ಅದರಂತೆ ಯನೈಟೆಡ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ 7 ದಿನ ಒಳ

ರೋಗಿಯಾಗಿದ್ದೆ. ನಾನು ಅಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದೇನೆ ಎಂದು ತೋರಿಸಲು ಮೂಲ ಡಿಸ್ಚಾರ್ಜ ಸಮ್ಮರಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಯನೈಟೆಡ್ ಆಸ್ಪತ್ರೆಯಲ್ಲಿ ಎಷ್ಟು ಖರ್ಚು ಮಾಡಿದ್ದೇನೆ ಎಂದು ತೋರಿಸಲು ಒಟ್ಟು ಬಿಲ್ಲನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ Xerox ಡಿಸ್ಚಾರ್ಜ ಕಾರ್ಡ ಪ್ರಕಾರ ನನಗೆ ಯಾವುದೇ ಸರ್ಜರಿ ಆಗಿಲ್ಲ ಎಂದರೆ ಸರಿಯಲ್ಲ. ಅದರಂತೆ ನಾನು ಮೋಟಾರ ಸೈಕಲನಲ್ಲಿ ಹಿಂಬದಿ ಸವಾರನಾಗಿ ಹೋಗುತ್ತಿರುವಾಗ ಮೋಟಾರ ಸೈಕಲ ಹೋಗಿ ಕಾರಿಗೆ ಡಿಕ್ಕಿ ಪಡಿಸಿತು ಎಂದು ಉಲ್ಲೇಖ ಇಲ್ಲ ಎಂದರೆ ಸರಿ. ಕಲ್ಯಾಣಿ ನಮ್ಮ ಗ್ರಾಮದವರು ಎಂದರೆ ಸರಿ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.